Women's day celebration on 17/05/24

# ಹೆಣ್ಣು ಎಲ್ಲದರಲ್ಲೂ ಸರಿಸಮಾನಳು

## ಮಹಿಳಾ ಸಬಲೀಕರಣ ಡಾ.ಎನ್.ನಳಿನ ಅಭಿಮತ



**ತುಮಕೂರು:** ಒಬ್ಬ ಯಶಸ್ವಿನ ಪುರುಷನ ಹಿಂದೆ ಒಬ್ಬಳು ಹೆಂಗಸು ಹಾಗೆ ಒಂದು ಹೆಂಗಸಿನ ಹಿಂದೆ ಒಬ್ಬ ಪುರುಷ ಇದ್ದರೆ ಅದು ಸಬಲೀಕರಣ ಎಂದು ತುಮಕುರಿನ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ನಳಿನ ಎನ್ ಹೇಳಿದರು.

ನಗರದ ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು ಐ ಯು.ಕ್ಯೂ ಎ.ಸಿ ಹಾಗೂ ಮಹಿಳಾ ಸಬಲೀಕರಣದ ವತಿಯಿಂದ ಡಾಕ್ಟರ್ ಎಚ್. ಎಮ್ ಗಂಗಾಧರಯ್ಯ ಸಭಾಂಗಣದಲ್ಲಿ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿದ್ದು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಭಾರತೀಯರು ಪುರಾತನ ಕಾಲದಿಂದಲೂ ಹೆಣ್ಣನ್ನು ದೇವಿ ಸ್ವರೂಪವಾಗಿ ಕಂಡಿದ್ದಾರೆ ಹೆಣ್ಣು ಎಲ್ಲದರಲ್ಲೂ ಸರಿಸಮಾನಳು ಪ್ರಮುಖವಾಗಿ ಹೆಣ್ಣಿಗೆ ಭೌತಿಕ ಸಬಲೀಕರಣ ಸರಿ ತಪ್ಪುಗಳನ್ನು ಗುರುತಿಸುವಂಥ ಸಾಮರ್ಥ್ಯ, ರಾಜಕೀಯ ಸಬಲೀಕರಣ ಹೆಣ್ಣು ಮಕ್ಕಳಿಗೆ 33% ಅಭಿವ್ಯಕ್ತಿ ಹೇಳಿಕೊಳ್ಳುವ ಸಬಲೀಕರಣ ಬೇಕಿದೆ, ಸಾಮಾಜಿಕ ಸಬಲೀಕರಣ ಅಬದ್ಧತೆಯ ನೆಲೆಗೊಂಡಿದೆ ಹೆಣ್ಣನ್ನು ಸಮಾಜದಲ್ಲಿ ನೋಡುವ ದೃಷ್ಟಿಕೋನ ಬದಲಾಗಬೇಕು. ಹೀಗೆ ಹಲವಾರು ಸಬಲೀಕರಣ ಹೆಣ್ಣು ಮಕ್ಕಳಿಗೆ ಬೇಕಿದೆ ಇದಕ್ಕೆಲ್ಲ ಕಾರಣ ಶಿಕ್ಷಣ ಪಡೆಯಬೇಕು ಆಗ ಮಾತ್ರ ಹೆಣ್ಣು ಈ ಪ್ರಪಂಚದಲ್ಲಿ ಒಂದು ಉನ್ನತ ಸ್ಥಾನಕ್ಕೆ ಬರಲು ಸಾಧ್ಯ ನಾವು ಹೆಣ್ಣು ಎಂದು ಹಿಂಜರಿಯದೆ ಆತ್ಮವಿಶ್ವಾಸವನ್ನು ಮುಂದೆ ಇಟ್ಟು ಬಂದಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಪುರುಷರಿಗೆ ಸರಿ ಸಮಾನವಾಗಿ ಸಮಾಜದಲ್ಲಿ ಯಶಸ್ವಿಯಾಗಿ ಜೀವನ ಸಾಗಿಸಬೇಕು ಎಂದು ಹೇಳಿದರು.

ಸಾಂಸ್ಕೃತಿಕ ಕಾರ್ಯದರ್ಶಿಗಳು ಮುಖ್ಯಸ್ಥರು ಕನ್ನಡ ವಿಭಾಗದ ಪ್ರೊ.ರಮೇಶ್ ಮಾತನಾಡಿ, ಮಣ್ಣೇ ಎಷ್ಟೊ ಹೆಣ್ಣು ಮಕ್ಕಳಿಗೆ ಶಿಕ್ಷಣ ಕಲಿಯುವ ಅವಕಾಶ ಸಿಗುವುದಿಲ್ಲ ಅದೆಲ್ಲ ನಿಮಗೆ ಸಿಕ್ಕಿದೆ ಅದನ್ನು ಗಮನದಲ್ಲಿ ಇಟ್ಟುಕೊಂಡು ಗುರಿಯ ಕಡೆಗೆ ಗಮನಹರಿಸಿ ಆಲೋಚನೆಗಳು ಸ್ವಂತಿಕೆ ಆಗಿರಲಿ ಎಂದು ನುಡಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಪ್ರೊಫೆಸರ್ ವಿನಯ್ ಕುಮಾರ್ ಎಲ್ಲ ಕ್ಷೇತ್ರಗಳನ್ನು ಹೆಣ್ಣು ಮಕ್ಕಳು ಪ್ರಗತಿಯಲ್ಲಿದ್ದಾರೆ ಸಮಾನತೆಯ ಹಕ್ಕು, ಇದಕ್ಕೆ ಕಾರಣ ಸಂವಿಧಾನ ಎಂದು ಡಾಕ್ಟರ್ ಬಿ .ಆರ್ ಅಂಬೇಡ್ಕರ್ ಅವರನ್ನು ನೆನೆದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಹೇಮಲತ ಪಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ನಾವೆಲ್ಲರೂ ಶಿಕ್ಷಣ ಪಡಿಯಬೇಕೆಂದರೆ ತಂದೆ ತಾಯಿ ಕಾರಣ ಅಂತ ಪೋಷಕರಿಗೆ ಗೌರವ ಕೊಟ್ಟು ಒಳ್ಳೆಯ ವಿದ್ಯಾಭ್ಯಾಸವನ್ನು ಪಡೆದುಕೊಂಡು ಸಮಾಜದಲ್ಲಿ ಒಂದು ಉನ್ನತ ಸ್ಥಾನದಲ್ಲಿ ಕೆಲಸ ಮಾಡಿದರೆ ಇದು ಕೂಡ ವಿದ್ಯಾರ್ಥಿಗಳು ಪೋಷಕರಿಗೆ ಕೊಟ್ಟಂತ ಉಡುಗೊರೆಯ ಸಬಲೀಕರಣ ಎಂದು ಅಧ್ಯಕ್ಷತೆಯ ಮಾತುಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಪ್ರೊಫೆಸರ್ ಜಿ . ಹನುಮಂತ ರಾಯಪ್ಪ ಮುಖ್ಯಸ್ಥರು ರೇಷ್ಮೆ ಕೃಷಿ ವಿಭಾಗ , ಶ್ರೀ ಸೈಯದ್ ಬಾಬು ಎಚ್ ಬಿ ಸಂಯೋಜಕರು ಐ. ಕ್ಯೂ.ಎ.ಸಿ , ಶ್ರೀಮತಿ ಆಶಾ ಎಚ್ .ಎಲ್ ಸಂಚಾಲಕರು ಮಹಿಳಾ ಸಬಲೀಕರಣ ಘಟಕ ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು, ಬೋಧಕರು- ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರು ಭಾಗಿಯಾಗಿದ್ದರು.












ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಮಹಾವಿದ್ಯಾಲಯ
SRI SIDDHARTHA FIRST GRADE COLLEGE
TUMAKURU - 572 105.
GPS Map Camera
Tumakuru, Karnataka, India
83FX+Q84, Saraswathipuram, Tumakuru, Karnataka 572105, India
Lat 13.324916°
Long 77.098706°
17/05/24 05:17 PM GMT +05:30
Google